## ಸಲ್ಲದ ಜಾಹೀರಾತು

ರಾಜ್ ಮ್ಯೂಸಿಕ್ ವಾಹಿನಿಯಲ್ಲಿ ಪ್ರತಿನಿತ್ಯ ರಾತ್ರಿ 9ಕ್ಕೆ ಜಾಹೀರಾತೊಂದು ಪ್ರಸಾರವಾಗುತ್ತಿದೆ. ಅದರಲ್ಲಿ ಲೈಂಗಿಕ ಶಕ್ತಿವೃದ್ಧಿ, ಚಿಕಿತ್ಸೆಗಾಗಿ ತಯಾರಿಸಿದ ಮಾತ್ರೆ ಮತ್ತಿತರ ಉತ್ಪನ್ನಗಳ ಕುರಿತು ಒಂದು ಬದಿ ವೈದ್ಯರು ವಿವರಿಸುತ್ತಾ ಹೋಗುತ್ತಾರೆ. ಮತ್ತೊಂದು ಬದಿಯಲ್ಲಿ 'ಲೈಂಗಿಕ ಸಮಸ್ಯೆಗೆ ಪರಿಹಾರ', 'ಸಂಗಾತಿಯನ್ನು ತೃಪ್ತಿಪಡಿಸಲು ಪರಿಹಾರ ಮಾರ್ಗ' ಇನ್ನೂ ಮುಂತಾದ ಶೀರ್ಷಿಕೆಗಳೊಂದಿಗೆ ಗಂಡು ಹೆಣ್ಣಿನ ಆಲಿಂಗನ, ಚುಂಬನದಂತಹ ಚಿತ್ರಗಳನ್ನು ತೋರಿಸುತ್ತಾರೆ. ರಾತ್ರಿ ಊಟ ಮಾಡಿ ಕುಟುಂಬದವರೆಲ್ಲರೂ ಕುಳಿತು ಟೀವಿ ನೋಡುವಾಗ ಈ ಜಾಹೀರಾತು ಮುಜುಗರವೆನಿಸುತ್ತದೆ. ದಯವಿಟ್ಟು ಇದರ ನಿರೂಪಣೆ, ಸಚಿತ್ರಗಳನ್ನು ಸುಧಾರಿಸಿ.

—ಕೆ. ಶ್ರೀನಿವಾಸ ರಾವ್ ಹರಪನಹಳ್ಳಿ

## ಜಾಹೀರಾತು ಕಡಿತಗೊಳ್ಳಲಿ

ಕಲರ್ಸ್ ಕನ್ನಡದ 'ರಾಮಾಚಾರಿ' ಸಮಾಜಕ್ಕೆ ಧನಾತ್ಮಕ ಸಂದೇಶವನ್ನು ನೀಡುತ್ತಿದೆ. ನ್ಯಾಯ, ನೀತಿ ಧರ್ಮಗಳನ್ನು ಪಾಲಿಸುತ್ತಾ, ಇತರರಿಗೆ ತೊಂದರೆಯನ್ನುಂಟುಮಾಡದೆ ಬದುಕಲು ಅಳವಡಿಸಿಕೊಳ್ಳಬೇಕಾದಂತಹ ಗುಣಗಳನ್ನು ತಿಳಿಸುತ್ತಿದೆ. ಶಂಕರ್ ಅಶ್ವತ್ಥ್ ಹಾಗೂ ರಾಮಾಚಾರಿ ಪಾತ್ರಧಾರಿಗಳ ನಟನೆ ಪ್ರಬುದ್ಧತೆಯಿಂದ ಕೂಡಿವೆ. ಕೆಲವೊಂದು ಸನ್ನಿವೇಶಗಳಲ್ಲಿ ಶಂಕರ್ ಅಶ್ವತ್ಥ್ ನಟನೆ ಕೆ.ಎಸ್. ಅಶ್ವತ್ಥ್ ಅವರ ನಟನೆಯನ್ನು ಹೋಲುತ್ತದೆ. ಮುಂಬರುವ ಸನ್ನಿವೇಶಗಳ ತುಣುಕುಗಳನ್ನು ಪದೇ ಪದೇ ತೋರಿಸುವುದು ಹಾಗೂ ಜಾಹೀರಾತುಗಳ ಅವಧಿಯನ್ನು ಕಡಿಮೆಗೊಳಿಸಿದಲ್ಲಿ ಧಾರಾವಾಹಿಯನ್ನು ನೆಮ್ಮದಿಯಿಂದ ನೋಡಬಹುದು.

—ಜಿ. ನಾಗೇಂದ್ರ ಕಾವೂರು, ಸಂಡೂರು

## ದೊಡ್ಡವರ 'ಡ್ರಾಮಾ'

ಝೀ ಕನ್ನಡದ ಡ್ರಾಮಾ ಜೂನಿಯರ್ಸ್ ಬಗ್ಗೆ ಎಲ್ಲರಿಗೂ ಗೊತ್ತಿದೆ. ಈಗ ಅದರ ನಾಲ್ಕನೆಯ ಆವೃತ್ತಿಗೆ ಒಂದು ಪ್ರೊಮೊ ಪ್ರಸಾರವಾಗುತ್ತಿದೆ. ಅದರಲ್ಲಿ ನಟ ರವಿಚಂದ್ರನ್ ಪ್ರಮುಖ ಪಾತ್ರವಹಿಸಿದ್ದಾರೆ. ಮೊದಲು ರವಿಚಂದ್ರನ್ ಅಪಹರಣವಾಗುತ್ತದೆ. ಫುಲ್ ಸೆಕ್ಯುರಿಟಿಯಲ್ಲಿರುವ ಅವರನ್ನು ಮಾಸ್ಟರ್ ಆನಂದ್ ಕಡೆಯವರು ಅಪಹರಿಸುತ್ತಾರೆ. ನಂತರ ಡ್ರಾಮಾ ಜೂನಿಯರ್ಸ್‌ಗೆ ತೀರ್ಪುಗಾರರನ್ನಾಗಿ ಮಾಡಲು ಹಾಗೆ ಮಾಡಿದ್ದು ಎಂಬುದು ಗೊತ್ತಾಗುತ್ತದೆ.

ಅದಕ್ಕೇಕೆ ಈ ಕಿಡ್ನಾಪ್ ಡ್ರಾಮಾ? ಎಂದು ಕೇಳುವ ರವಿಚಂದ್ರನ್ ಅವರಿಗೆ ಅದು ಡ್ರಾಮಾ ಅನ್ನೋ ಸತ್ಯ ಮೊದಲೇ ಗೊತ್ತಿರುತ್ತೇನೊ? ನಂತರ ಅವರ ಅವಾಜ್‌ಗೆ ಮಕ್ಕಳೆಲ್ಲ ತಮ್ಮ ನಾಯಕನ ಸಹಿತ ದಿಕ್ಕಾಪಾಲಾಗಿ ಓಡುವ 'ನಾಟಕ'ವಂತೂ ಅಯ್ಯೋ ಅನಿಸುತ್ತದೆ.

—ವಾ. ಮುರಳೀಧರ, ತೀರ್ಥಹಳ್ಳಿ

ವಾರದ ಪತ್ರ

## ದೊರೆಸಾನಿ ಸತ್ಯವತಿ ಮಹಾತ್ಮೆ ಆಗಲಿ

ಕಲರ್ಸ್ ಕನ್ನಡದ 'ದೊರೆಸಾನಿ'ಯಲ್ಲಿ ಸತ್ಯವತಿಯು ಮಿಕ್ಸಿ ಮತ್ತು ಸೀರೆ ಶಾಪಿಂಗ್ ಮಾಡುವ ದೃಶ್ಯ ವಿಚಿತ್ರ ಎನಿಸುತ್ತದೆ. ಅದು ಹೆಣ್ಣು ಕುಲಕ್ಕೇ ಮುಜುಗರ, ಕಸಿವಿಸಿ ಮತ್ತು ಅವಮಾನ ಮಾಡುವಂತೆ ಇದೆ. ಅವಳು ಮನೆಯಲ್ಲಿ ಗಂಡನ ಕುತ್ತಿಗೆಪಟ್ಟಿ ಹಿಡಿಯುವುದು ಮತ್ತು ಗಂಡ ಅವಳಕಾಲಿಗೆ ಬೀಳುವುದು ಗಂಡು ಕುಲಕ್ಕೇ ಅವಮಾನ. ನೋಡಲು ಅಸಹ್ಯ ಮತ್ತು ಮನಕರಗಿಸುವ ಈ ದೃಶ್ಯಾವಳಿಗಳನ್ನು ಇಷ್ಟು ಕಠೋರವಾಗಿ ತೋರಿಸುವ ಅಗತ್ಯವಿತ್ತೇ?

ಯಾವುದೋ ಕಾರಣಕ್ಕಾಗಿ ಸೈಕೊ ಆದ ಸತ್ಯವತಿಯ ನಡವಳಿಕೆ ಸಹಜವಿಲ್ಲ. ಆದರೆ, ಅದನ್ನು ವೀಕ್ಷಕರೂ ಅಸಹ್ಯ, ಮುಜುಗರ ಪಡದಂತೆ ತೋರಿಸಬಹುದಿತ್ತು. ಧಾರಾವಾಹಿಗಳು ನಿಜಜೀವನಕ್ಕೆ ಹತ್ತಿರ ಎನ್ನುತ್ತಾರೆ. ಇದು ವಾಸ್ತವ ಎನಿಸುವುದಿಲ್ಲ. ಕಥೆ ಸತ್ಯವತಿಯ ಸೇಡಿನ ಹಿಂದೆಯೇ ಸುತ್ತುತ್ತಿದೆ. ಧಾರಾವಾಹಿಯ ಹೆಸರನ್ನು 'ಸತ್ಯವತಿಯ ಸೇಡು' ಅಥವಾ 'ಸತ್ಯವತಿ ಮಹಾತ್ಮೆ' ಎಂದು ಬದಲಿಸುವುದು ಸೂಕ್ತ.

—ರಮಾನಂದ ಶರ್ಮಾ, ಬೆಂಗಳೂರು

## ಖಳನಾಯಕಿ ಪ್ರೇಮ

ಧಾರಾವಾಹಿ ನಿರ್ದೇಶಕರಿಗೆ ಖಳನಾಯಕಿಯರ ಮೇಲೆ ಏಕೆ ಅಷ್ಟೊಂದು ಪ್ರೀತಿ? 'ಗೀತಾ'ದ ಭಾನುಮತಿ–ಸಿತಾರ ಅಷ್ಟು ಬುದ್ಧಿವಂತರೆ! ಎಲ್ಲಿಯವರೆಗೆ ವಿಜಿಗೆ ಸಾಕು ತಾಯಿಯ ಮೇಲಿನ ಕುರುಡು ಪ್ರೀತಿ ಇರುತ್ತೋ, ಎಲ್ಲಿಯವರೆಗೆ ಮಂತ್ರಿ ಸೂರ್ಯಪ್ರಕಾಶ್ ಹೆಂಡತಿಗೆ ಹೆದರುತ್ತಾನೋ ಅಲ್ಲಿಯವರೆಗೆ ಕಥೆ ಮುಕ್ತಾಯವಾಗುವುದಿಲ್ಲ ಎಂಬುದು ನೂರಕ್ಕೆ ನೂರು ಸತ್ಯ.

—ಶ್ರೀನಿವಾಸ್ ಸಿ.ಆರ್.

## ಶ್ಲಾಘನೀಯ ಪರಿಚಯ

ಚಂದನ ವಾಹಿನಿಯ 'ವಾರದ ಅತಿಥಿ' ಕಾರ್ಯಕ್ರಮದಲ್ಲಿ ನಟಿ ಶೈಲಶ್ರೀ ಸುದರ್ಶನ್ ಅವರ ಸಂದರ್ಶನ ಬಹಳ ಚೆನ್ನಾಗಿ ಮೂಡಿಬಂತು. ನಿರೂಪಕರು ಕೂಡ ಚೆನ್ನಾಗಿ ಕಾರ್ಯಕ್ರಮ ನಡೆಸಿಕೊಟ್ಟರು. ಗೊತ್ತಿರದ ಸಾಕಷ್ಟು ವಿಷಯಗಳು ಈ ಸಂದರ್ಶನದಿಂದ ತಿಳಿಯಲು ಸಹಾಯವಾಯಿತು. ಹೀಗೆ ಉತ್ತಮ ಕಾರ್ಯಕ್ರಮಗಳು ಚಂದನವಾಹಿನಿಯಲ್ಲಿ ಮೂಡಿಬರಲಿ.

—ಮೇಘನಾ ರಘುನಂದನ್, ಹೂವಿನಹಡಗಲಿ

ಬಹುಮುಖ: ನಟಿ ಶೈಲಶ್ರೀ ಅವರ ಬಹುಮುಖ ವ್ಯಕ್ತಿತ್ವದ ಪರಿಚಯ ಶ್ಲಾಘನೀಯ. ಇಂತಹ ಕಾರ್ಯಕ್ರಮಗಳ ನೀಡಿದ ಚಂದನಕ್ಕೆ ನಮನಗಳು.

—ಕೆ.ಎಸ್. ಸೋಮೇಶ್ವರ, ಬೆಂಗಳೂರು

## ಚರ್ಚೆ ಸ್ಪಷ್ಟವಾಗಿರಲಿ

ಟೀವಿ– 9 ಕನ್ನಡ ಸುದ್ದಿ ವಾಹಿನಿಯಲ್ಲಿ ಹಿಂದಿ ಸಿನಿಮಾ 'ದಿ ಕಾಶ್ಮೀರ್ ಫೈಲ್ಸ್' ಎಂಬ ಬಗ್ಗೆ ವಿಚಾರ ವಿನಿಮಯ ನಡೆಯುತ್ತಿತ್ತು. ಕೊನೆಗೆ ಅದು ಅರ್ಥವಿಲ್ಲದ ವಾಗ್ವಾದವಾಗಿ ಕೊನೆಗೊಂಡಿತು. ಸಿನಿಮಾ ಹೇಳಿರುವ ವಿಷಯದ ವಿರುದ್ಧ ಅಭಿಪ್ರಾಯ ದಾಖಲಿಸುವವರ ಮಾತನ್ನು ಆಲಿಸುವುದಕ್ಕೆ ಉಳಿದವರಿಗೆ ಅಸಹನೆ. ಅದನ್ನು ದೊಡ್ಡ ದನಿಯಲ್ಲಿ ಖಂಡಿಸುತ್ತಾರೆ. ಪರ ಮತ್ತು ವಿರುದ್ಧದ ಆ ಜಗಳ ಕೇಳಲು ಅಸಹ್ಯ ಎನಿಸುತ್ತಿತ್ತು.

—ಕೆ.ಎಸ್.ಎಸ್, ಬೆಂಗಳೂರು

## ಸಂಪ್ರದಾಯ ಏಕಿಲ್ಲ

ಸ್ಟಾರ್ ಸುವರ್ಣದ 'ಎಡೆಯೂರು ಶ್ರೀ ಸಿದ್ಧಲಿಂಗೇಶ್ವರ'ದ ರೇವತಿ ಹಣೆ ಮೇಲೆ ವಿಭೂತಿ ಕೊರಳಲ್ಲಿ ಲಿಂಗು ಇಲ್ಲ ಏಕೆ? ಮುಂದಿನ ಸಂಚಿಕೆಗಳಲ್ಲಿ ವಿವಾಹಪೂರ್ವದಲ್ಲಿ ನಡೆಯುವ ಛಾಯಾಗ್ರಾಹಣ ಮತ್ತು ಮದುವೆಯ ನಂತರದ ಮಧುಚಂದ್ರದ ದೃಶ್ಯಗಳು ಬರಬಹುದೇನೋ ಅನ್ನುವ ಸಂಶಯ ಕಾಡುವಂತೆ ಆಗಿದೆ.

—ಬಸವರಾಜ ಹರಿಹರ, ಧಾರವಾಡ

## ವೀಕ್ಷಕರಿಗೆ ಫಜೀತಿ

ಇತ್ತೀಚಿಗಿನ ದಿನಗಳಲ್ಲಿ 'ಪುಟ್ಟಕ್ಕನ ಮಕ್ಕಳು'ನ ಪ್ರತೀ ಸಂಚಿಕೆಯೂ ಅತ್ಯಂತ ತಾಳ್ಮೆ ಪರೀಕ್ಷಿಸುತ್ತಿದೆ ಎಂದು ಅನಿಸುತ್ತಿದೆ.

ಅದಕ್ಕೊಂದು ಉದಾಹರಣೆ 'ಕಪೋಲ ಕಲ್ಪಿತ ಗ್ರಾಮ ಪಂಚಾಯಿತಿ' ದೃಶ್ಯ ತೋರಿಸಲು ಕಳೆದ ಒಂದು ತಿಂಗಳಿಂದ ಒದ್ದಾಡುತ್ತಿದೆ. ಕೇವಲ ಒಂದೆರಡು ದೃಶ್ಯಗಳನ್ನು ಪ್ರತೀ ಸಂಚಿಕೆಯಲ್ಲಿ ಪ್ರಸಾರ ಮಾಡುತ್ತಿದೆ. ಬೇಸರದ ವಿಷಯ ಏನೆಂದರೆ ಪ್ರತೀ ಸಂಚಿಕೆಯ ಅವಧಿ ಕೇವಲ ಮೂವತ್ತು ನಿಮಿಷ. ಆದರೆ ಕಥೆ ತೋರಿಸುವ ಅವಧಿ 10 ನಿಮಿಷ. ಒಟ್ಟು 5 ನಿಮಿಷ ಜಾಹೀರಾತಿಗೆ ಮೀಸಲು. 15 ನಿಮಿಷ ಏನಾಗುತ್ತೆ ಅಂದ್ರೆ, 'ಕೇಳ್ರಪ್ಪೋ ಕೇಳ್ರಿ ಪಂಚಾಯ್ತಿ ಅನ್ನೋ ಡಂಗುರ'!

—ಆರ್. ವೀರೇಶ್ ಕುಮಾರ್, ಬೆಂಗಳೂರು